# ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರ ಕಾರ್ಯಾಲಯ

ದೂರಶಿಕ್ಷಣ ನಿರ್ದೇಶನಾಲಯ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451 ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ: 08282 - 256450, 256426, 256246

Fax: 08282-256370; website:www. kuvempuuniversitydde.org

E-mail: info@kuvempuuniversitydde.org; ssgc@ kuvempuuniversitydde.org


## ಆಂತರಿಕ ಮೌಲ್ಯ ಮಾಪನದ ಸಂಕ್ಷಿಪ್ತ ಸಾರಲೇಖಗಳಿಗೆ ವಿಷಯಗಳು (2015 -16)

## ಸ್ನಾತಕೋತ್ತರ ಡಿಪ್ಲೊಮಾ - 'ಕನ್ನಡ ಪತ್ರಿಕೋದ್ಯಮ'

ಸೂಚನೆಗಳು :

1. ಪ್ರತೀ ಪತ್ರಿಕೆಗೆ ಒಟ್ಟು 20 ಅಂಕಗಳು. ಅವುಗಳಲ್ಲಿ ಮೊದಲ ಅಸ್ಸೈನ್‌ಮೆಂಟ್‌ಗೆ 10 ಅಂಕಗಳು ಮತ್ತು ಎರಡನೇ ಅಸ್ಸೈನ್‌ಮೆಂಟ್‌ಗೆ 05 ಅಂಕಗಳು. ಉಳಿದ ಐದು ಅಂಕಗಳು ಸಂಪರ್ಕ ತರಗತಿಯ ಹಾಜರಿಗೆ.
2. ಪ್ರತೀ ಪತ್ರಿಕೆಯ ಮೊದಲ ಅಸ್ಸೈನ್‌ಮೆಂಟ್ ಕನಿಷ್ಠ 10 ಪುಟಗಳನ್ನಾದರೂ ಹೊಂದಿರಬೇಕು ಮತ್ತು ಎರಡನೇ ಅಸ್ಸೈನ್‌ಮೆಂಟ್ ಕನಿಷ್ಠ 05 ಪುಟಗಳನ್ನಾದರೂ ಹೊಂದಿರಬೇಕು.
3. ಸಾರಲೇಖಗಳನ್ನು ಬರೆಯಲು ಪ್ರಾರಂಭಿಸುವ ಮೊದಲು ವಿದ್ಯಾರ್ಥಿಗಳು ಇದರೊಂದಿಗೆ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಸೂಚನೆಗಳನ್ನು (Instructions List) ಓದಲು ಸೂಚಿಸಿದೆ.
4. ಹೆಚ್ಚಿನ ಮಾಹಿತಿಗಾಗಿ ಕೋರ್ಸ್ ಸಂಯೋಜಕರನ್ನು ಸಂಪರ್ಕಿಸಬಹುದು . (ಡಾ. ಸತೀಶ್ ಕುಮಾರ್: 94488 70461)

**ಪತ್ರಿಕೆ–1: ಪತ್ರಿಕೋದ್ಯಮದ ಸ್ವರೂಪ, ಗುಣಲಕ್ಷಣಗಳು ಮತ್ತು ಮಹತ್ವ**

1. ವಿಶಿಷ್ಟ ಸಾಧನೆ ಮಾಡಿದ ಯಾವುದಾದರೂ ಸಂಸ್ಥೆಯ ಕುರಿತು ಒಂದು ನುಡಿಚಿತ್ರ ಬರೆಯಿರಿ. (10 ಅಂಕಗಳು)
2. ಕೇಂದ್ರ ಸರಕಾರದ ಎರಡು ವರ್ಷಗಳ ಸಾಧನೆ ಕುರಿತು ಒಂದು ವಿಮರ್ಶಾತ್ಮಕ ಲೇಖನ ಬರೆಯಿರಿ. (05 ಅಂಕಗಳು)

**ಪತ್ರಿಕೆ–2: ಕನ್ನಡ ಪತ್ರಿಕೋದ್ಯಮದ ಐತಿಹಾಸಿಕ ಬೆಳವಣಿಗೆ– ವಿವಿಧ ಮಾದರಿಗಳು–ಸಾಹಿತ್ಯಕ ಮತ್ತು ಸಾಂಸ್ಕೃತಿಕ ಆಯಾಮಗಳು–ವಿವಿಧ ವೈಚಾರಿಕ ನೆಲೆಗಳು**

1. ಕನ್ನಡದ ಯಾವುದಾದರೂ ಎರಡು ದಿನಪತ್ರಿಕೆಗಳ ನಡುವಿನ ಸಾಮ್ಯತೆ ಮತ್ತು ಭಿನ್ನತೆ ಬಗ್ಗೆ ಒಂದು ವಿಶ್ಲೇಷಣಾತ್ಮಕ ಲೇಖನ ಬರೆಯಿರಿ. (10 ಅಂಕಗಳು)
2. ಕನ್ನಡ ಪತ್ರಿಕೋದ್ಯಮದ ಪ್ರಸ್ತುತ ಸ್ಥಿತಿಗತಿ ಕುರಿತು ಒಂದು ಲೇಖನ ಬರೆಯಿರಿ. (05 ಅಂಕಗಳು)

**ಪತ್ರಿಕೆ–3: ಕನ್ನಡ ಪತ್ರಿಕೋದ್ಯಮ ಮತ್ತು ಇತರ ಸಮೂಹ ಮಾಧ್ಯಮಗಳು**

1. ಕನ್ನಡ ಸುದ್ದಿ ಟಿವಿ ವಾಹಿನಿಗಳ ಬೆಳವಣಿಗೆ ಮತ್ತು ಪ್ರಸ್ತುತ ಸ್ಥಿತಿಗತಿ ಬಗೆಗೆ ಒಂದು ವಿಶ್ಲೇಷಣಾತ್ಮಕ ಪ್ರಬಂಧ ಬರೆಯಿರಿ. (10 ಅಂಕಗಳು)
2. 'ಭಾರತದಲ್ಲಿ ದೇಶದ್ರೋಹ ಕಾನೂನಿನ ದುರುಪಯೋಗ' ಕುರಿತು ಒಂದು ಬಾನುಲಿ ಭಾಷಣ ಬರೆಯಿರಿ. (05 ಅಂಕಗಳು)

**ಪತ್ರಿಕೆ–4: ಸಂಪ್ರಬಂಧ:** ವಿದ್ಯಾರ್ಥಿಗಳು ಕನ್ನಡದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದಾದರೂ ವಿಷಯವನ್ನು ಆಯ್ಕೆಮಾಡಿಕೊಂಡು ಕೋರ್ಸ್ ಸಂಯೋಜಕರು ಸೂಚಿಸಿದ ಮಾರ್ಗದರ್ಶಕರ ಮಾರ್ಗದರ್ಶನದಂತೆ ಅಧ್ಯಯನ ಮಾಡಿ ಸಂಪ್ರಬಂಧ ರಚಿಸಿ, ಅದರ ಮೂರು ಮುದ್ರಿತ ಪ್ರತಿಗಳಲ್ಲಿ ಎರಡು ಪ್ರತಿಗಳನ್ನು ನಿಗದಿತ ದಿನಾಂಕದೊಳಗೆ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಉಳಿದ ಒಂದು ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಂಡು ಮೌಖಿಕ ಪರೀಕ್ಷೆ ಸಂದರ್ಭದಲ್ಲಿ ತರಬೇಕು. ಸಂಪ್ರಬಂಧ ರಚನೆಗೆ 80 ಅಂಕಗಳು ಮತ್ತು ಸಂಪ್ರಬಂಧದ ಆಂತರಿಕ ಮೌಲ್ಯಮಾಪನದ 20 ಅಂಕಗಳನ್ನು ಮೌಖಿಕ ಪರೀಕ್ಷೆ ಮೂಲಕ ನೀಡಲಾಗುವುದು. ಸಂಪ್ರಬಂಧ ರಚನೆ ಕುರಿತು ಮಾರ್ಗದರ್ಶನ ಸೂತ್ರಗಳನ್ನು ನೀಡಲಾಗಿದ್ದು, ಅವುಗಳಿಗೆ ಅನುಗುಣವಾಗಿರುವ ಸಂಪ್ರಬಂಧಗಳನ್ನು ಮಾತ್ರ ಸ್ವೀಕರಿಸಲಾಗುವುದು.

ವಿ.ಸೂ. ಪ್ರತೀ ಪತ್ರಿಕೆಯ ಆಂತರಿಕ ಮೌಲ್ಯಮಾಪನದ 05 ಅಂಕಗಳು ಸಂಪರ್ಕ ತರಗತಿಯ ಹಾಜರಿಗೆ ಸೀಮಿತವಾಗಿರುವುದರಿಂದ ಮತ್ತು ಸಂಪ್ರಬಂಧ ರಚನೆ ಕುರಿತ ಮಾಹಿತಿಯನ್ನು ಸಂಪರ್ಕ ತರಗತಿಯಲ್ಲೇ ನೀಡುವುದರಿಂದ ಈ ಕೋರ್ಸ್ ಆಯ್ಕೆಮಾಡಿಕೊಂಡ ಎಲ್ಲಾ ಅಧ್ಯಯನ ಕೇಂದ್ರಗಳ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಂಪರ್ಕ ತರಗತಿಗೆ ಹಾಜರಾಗಬೇಕು.